ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಶಿವಮೊಗ್ಗ ಮತ್ತು ತುಮಕೂರು ಟೌನ್‌ಗಳಿಗೆ ಮಾತ್ರ ನಣ್ಣ ಕೈಗಾರಿಕೆಗಳಿಗೆ ಹಣ ಮಂಜೂರು ಮಾಡಿ ದಾವಣಗೆರೆಗೆ ಮಂಜೂರು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿರುವುದಕ್ಕೆ ಕಾರಣವೇನು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ದಾವಣಗೆರೆ 'ಸಿಟಿ' ಎನ್ನಿಸಿಕೊಳ್ಳುತ್ತದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—'ಸಿಟಿ' ಎಂದು ಅನ್ನಿಸಿಕೊಂಡದ್ದೇ ಪಾಪವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈಸೂರು, ಬೆಂಗಳೂರು, ದಾವಣಗೆರೆ ಮತ್ತು ಕೋಲಾರದ ಚಿನ್ನದಗಣಿ ಪ್ರದೇಶ ಇವು ನಾಲ್ಕು ಕ್ಷೇತ್ರಗಳಿಗೂ ಈ ಯೋಜನೆ ಅನ್ವಯವಾಗುವುದಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಕೇಂದ್ರಗಳನ್ನಿಟ್ಟಿದ್ದೀರಿ. ಅದೇ ದಾವಣಗೆರೆಗೆ ಏಕೆ ಅನ್ವಯಿಸುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೆಂಗಳೂರಿನಲ್ಲಿ ಒಂದು ಟ್ರೈನಿಂಗ್ ಸೆಂಟರ್ ಇಟ್ಟುಕೊಂಡಿದ್ದೇವೆ. Rural Industrialisation Schemeನಲ್ಲಿ ಬೆಂಗಳೂರು ಸಿಟಿ ಇರಲಿ ಎಂದು ಮಾಡಿದ್ದೇವೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಚಿತ್ರದುರ್ಗ ಜಿಲ್ಲೆಯಲ್ಲಿ ನೀವು ಕೊಟ್ಟಿರುವ ಮೂರು ಕೇಂದ್ರಗಳಲ್ಲಿ ಒಂದೂ ಕೆಲಸ ಮಾಡುತ್ತಿಲ್ಲ. ಕೊಡಗನೂರಿನಲ್ಲಿರುವ ಕೇಂದ್ರದಲ್ಲಿ ಕೆಲಸ ನಿಂತು ಹೋಗಿ ಎಷ್ಟೋ ದಿವಸಗಳಾಯಿತು. ಆದುದರಿಂದ ಈಗಲಾದರೂ ಒಂದು ಕೇಂದ್ರವನ್ನು ದಾವಣಗೆರೆಯಲ್ಲಿ ಪ್ರಾರಂಭಮಾಡಿ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೊಡಗನೂರಿನಲ್ಲಿರುವ ಕೇಂದ್ರ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂಬ ವಿಷಯ ನನ್ನ ಗಮನಕ್ಕೆ ಬಂದಿದೆ ಆ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದೇವೆ ?

ಶ್ರೀ ಟಿ. ಹನುಮಯ್ಯ.—ಹರಿಜನರಿಗೆ ಸಂಬಂಧಪಟ್ಟ ಚರ್ಮದ ಕೈಗಾರಿಕೆ ಮತ್ತು ಚಕ್ಕೆ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಸರ್ಕಾರದವರು ಏನು ಏರ್ಪಾಡು ಮಾಡುತ್ತಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ಯಾಪ್ಟ್ ಸೊಸೈಟಿಗಳನ್ನು ಮಾಡಿಕೊಂಡು, ಮುಂದೆ ಬಂದ ಪಕ್ಷದಲ್ಲಿ ಷೇರು ತೆಗೆದುಕೊಳ್ಳುವುದಕ್ಕೆ ಶೇಕಡ 75 ಕೊಡುತ್ತೇವೆ ಮತ್ತು ಅವರ ಮುಂದಿನ ಬಂಡವಾಳಕ್ಕೆ ಶೇಕಡ 75 ರಷ್ಟು ಸಹಾಯ ಕೊಡುತ್ತೇವೆ. ಇತರ ಸಹಾಯ ಬೇಕು ಎಂದರೆ ಆ ರೀತಿ ಸಹಾಯ ಮಾಡುವುದಕ್ಕೂ ಒಂದು ವ್ಯವಸ್ಥೆ ಇದೆ.

ಶ್ರೀ ಟಿ. ಹನುಮಯ್ಯ.—ಈ ಹಳೆಯ ಕಾಲದ ಪದ್ಧತಿಯನ್ನನುಸರಿಸಿ, ಚಕ್ಕೆ ಕೈಗಾರಿಕೆಯನ್ನು ಹರಾಜು ಮಾಡಿ, ಹರಿಜನರಿಗೆ ದೊರೆಯದಂತೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಈ ಭಾಗಕ್ಕೆ ಸಂಬಂಧಪಟ್ಟಿಲ್ಲ.

Sri T. HANUMIAH.—It is a home industry of the rural parts of the State belonging mostly to Harijans.

ಉಪಾಧ್ಯಕ್ಷರು.—ರೂರ್ ವಿಚಾರ ಇದರಲ್ಲಿದೆ. Industrial loan ವಿಚಾರ ಮಾತ್ರ ಕೇಳಬಹುದು.

ಶ್ರೀ ಟಿ. ಹನುಮಯ್ಯ.—ರೂರ್ ವಿಚಾರವಲ್ಲ. ಕೈಗಾರಿಕೆ ವಿಚಾರ ಸಹ ಇದೆ. ಆದುದರಿಂದ ಹರಿಜನರಿಗೆ ಸಂಬಂಧಪಟ್ಟ ಕೈಗಾರಿಕೆಗಳನ್ನು ಉತ್ತಮಪಡಿಸುವುದಕ್ಕೆ ಸರ್ಕಾರದವರು, ಹಿಂದಿನ ಕಾಲದ ಸರ್ಕಾರದವರು ಯೋಚನೆ ಮಾಡುತ್ತಿದ್ದುದಕ್ಕೆ ಬದಲಾಗಿ ಯೋಚನೆಮಾಡಿ ಹರಿಜನರ ಪುರೋಭಿವೃದ್ಧಿಗೆ ಬೇಕಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನಾಗಲೇ ತಿಳಿಸಿದಂತೆ ಯಾವ ಯಾವ ಕೈಗಾರಿಕೆಗಳನ್ನು ಅಭಿವೃದ್ಧಿಮಾಡಬೇಕೆಂಬ ಅಭಿಪ್ರಾಯವಿದೆಯೋ ಆ ಕೈಗಾರಿಕೆಗಳವರು ಸೊಸೈಟಿಗಳನ್ನು ಮಾಡಿಕೊಂಡು ಮುಂದೆ ಬಂದ ಪಕ್ಷದಲ್ಲಿ ಅದಕ್ಕೆ ಸಹಾಯ ಮಾಡುವುದಕ್ಕೆ ಅನೇಕ ಮಾರ್ಗಗಳಿವೆ. ಅದನ್ನು ಮಾಡುವುದಕ್ಕೆ ತಕ್ಕ ಸಹಾಯ ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ಸರ್ಕಾರದವರು ಸೊಸೈಟಿಗಳನ್ನು ಮಾಡಿಕೊಂಡಿದ್ದರೆ, ಅಂಥ ಸೊಸೈಟಿಗಳ ಮೂಲಕ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುತ್ತೇವೆಂದು ಹೇಳಿದರೆ ಸರ್ಕಾರದವರು ಸಹಾಯ ಮಾಡುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗತ್ಯವಾಗಿ ಮಾಡುತ್ತೇವೆ.

1 P.M.

ಶ್ರೀ ಜಿ. ಪುಟ್ಟಸ್ವಾಮಿ.—ಚಿಕ್ಕಮಗಳೂರಿನಲ್ಲಿ ಅರಗಿನಿಂದ ಸಾಮಾನುಗಳನ್ನು ತಯಾರಿಸುವ ಕೇಂದ್ರವಿದೆಯೆಂದು ಹೇಳಿದ್ದೀರಿ. ಅದಿರುವುದು ನಿಜವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ಬಂದಿರುವ ಸಮಾಚಾರದ ಪ್ರಕಾರ ನಿಜ.

ಶ್ರೀ ಜಿ. ಪುಟ್ಟಸ್ವಾಮಿ.—ಅದು ಕೆಲಸ ಮಾಡುತ್ತಿದೆಯೇ ಇಲ್ಲವೇ ಎಂಬುದನ್ನು ವಿಚಾರಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಚಾರಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ಚರ್ಮ ಹದಮಾಡುವುದು, ಚರ್ಮ ಸುಲಿಯುವುದು, ಚರ್ಮ ಹೊಲಿಯುವುದು ಮುಂತಾದ ಗೃಹ ಕೈಗಾರಿಕೆಗಳನ್ನು ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಏರ್ಪಡಿಸಲಾಗಿದೆ. ಉಳಿದ ಜಿಲ್ಲೆಗಳಲ್ಲೂ ಕೂಡ ಇವುಗಳ ಕೇಂದ್ರವನ್ನು ಏರ್ಪಾಡು ಮಾಡಲು ಯೋಚನೆ ಮಾಡಿದ್ದೀರಾ ?

Mr. DEPUTY SPEAKER.—That question does not arise out of the answers given here. The question relates to industrial loans and the Hon'ble Member is asking about starting of new industries.

Devarahalli Tank, Bommalapura Tank and anecut across Kalakatte Halla (Estimates).

*Q.—529. Sri H. K. SIVARUDRAPPA (Gundlupet-Heggadadevankote).—

Will the Government be pleased to state :—

(a) whether the estimates for Devarahalli tank, Bommalapura tank and the anecut across the Kalakatte halla near Hullepura, Gundlupet Taluk have been sanctioned ;

(*b*) if so, the amount of each estimate; if not, the reason for not sanctioning and the estimate which has not been sanctioned;

(*c*) whether the said works would be undertaken in the budget year itself?

A.—Sri H. M. CHANNABASAPPA (Minister for Industries).—

(*a*) (i) Devarahalli tank—Sanctioned.

(ii) Bommalapura tank—Sanctioned.

(iii) Kallakattehalla near Hullepura—Not sanctioned.

	Rs.
(*b*) (i) Devarahalli tank estimate ...	89,000
(ii) Bommalapura tank estimate ...	57,900
(iii) Anicut across Kallakattehalla estimate ..	1,45,000

This is under consideration.

(*c*) The first two will be taken up during the year 1956-57 subject to the ryots agreeing to pay contribution and water rate as prescribed.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಉತ್ತರದಲ್ಲಿ ಕಾಳಕಚ್ಚೆ ಹಳ್ಳಕ್ಕೆ ಅಡ್ಡಲಾಗಿ ಒಂದು ಅಣೆಕಟ್ಟನ್ನು ಕಟ್ಟುವುದಕ್ಕೆ 1,45,000 ರೂಪಾಯಿಗಳ ಅಂದಾಜಾಗಿದೆಯೆಂದು ಹೇಳಿದೆ. ಅದನ್ನು ಕೈಬಿಡಬೇಕೆಂದು ಚೀಫ್ ಇಂಜನಿಯರಿಗೆ ಶಿಫಾರ್ಸು ಮಾಡಿದ್ದೀರಾ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಏಕೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಅಣೆಕಟ್ಟನ್ನು ಕಟ್ಟಿದರೆ ಗುಂಡಲುಪೇಟೆಯ ಅಮಾನಿಕೆರೆಗೆ ತೊಂದರೆಯಾಗುತ್ತದೆ. ಅದಕ್ಕೆ ನೀರು ಸಾಲದೆ ಅಲ್ಲಿನ ಬೆಳೆ ಒಣಗುವ ಪರಿಸ್ಥಿತಿ ಬರುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಾದರೆ ಯಾವ ಜಮೀನುಗಳಿಗಾಗಿ ಅಣೆಕಟ್ಟನ್ನು ಕಟ್ಟಬೇಕೆಂದು ಕೇಳಿತ್ತೋ ಆ ಜಮೀನುಗಳಿಗೆ ನೀರಿಲ್ಲದೆ ಹೋಗುತ್ತದೆ. ಆ ಜಮೀನುಗಳು ಖಾಯಂ ತರಿಯಾಗಿದ್ದು ತರೀ ಕಂದಾಯ ಅವಕ್ಕೆ ತೆಗೆದುಕೊಂಡಮೇಲೆ ಆ ಜಮೀನುಗಳಿಗೆ ನೀರನ್ನೊದಗಿಸಬೇಕಾದ ಜವಾಬ್ದಾರಿ ಸರ್ಕಾರದ ಮೇಲೆ ಇಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದುವರೆಗೆ ಹೇಗೆ ನಡೆಯುತ್ತಿದೆಯೋ ಆ ರೀತಿ ನಡೆಯುತ್ತದೆ. ತರಿ ಎಂದು ವಿಧಾಯಕ ಮಾಡಿರುವ ಷರತ್ತಿನ ಪ್ರಕಾರ ನಡೆಯುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈಗಿರುವ ಬಿಜಾಪುರ ಕೆರೆಯಿಂದ ನೀರು ಸರಿಯಾಗಿ ಒದಗದೆ ಇರುವುದೂ, ಒಡ್ಡು ಸರಿಯಾಗಿಲ್ಲದೆ ವರ್ಷೇ ವರ್ಷೆ ಕೊಚ್ಚಿ ಹೋಗಿ ಅದರಿಂದ ರೈತರಿಗೆ ನಷ್ಟವಾಗುತ್ತಿರುವುದೂ ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದ ಅನುಮತಿ ಪಡೆದು ಹಾಕಿರುವ ಒಡ್ಡುಗಳು ಕೆಲವಿವೆ, ಅನುಮತಿ ಪಡೆಯದೆ ಹಾಕಿರಬಹುದಾದವು ಕೆಲವಿವೆ. ಅನುಮತಿ ಪಡೆದಿರುವುದನ್ನು ಮಾತ್ರ ಬಿಟ್ಟು ಬಾಕಿಯಾದವನ್ನು ಕಿತ್ತು ಹಾಕಲು ಅವಕಾಶವಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಾದರೆ ನಾನು ಹೇಳಿದುದಕ್ಕೆ ಅನುಮತಿಯಿದೆಯೆ ಅಥವಾ ಇಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ಒಡ್ಡು ಎಂದು ಹೇಳಿದರೆ ಉತ್ತರ ಕೊಡಬಹುದು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಿಮ್ಮಾಜಪ್ಪ ಒಡ್ಡು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರ ವಿಚಾರ ಹೇಳಲು ನೋಟೀಸ್ ಬೇಕು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಒಡ್ಡು ರೀಪೆರಿ ಮಾಡದೆ ತರಿ ಕಂದಾಯ ಹೇಗೆ ದಾಖಲು ಮಾಡುತ್ತೀರಿ?

Sri H. M. CHANNABASAPPA.—That is a matter which I will have to examine and let you know.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಇದನ್ನು ಪರಿಶೀಲಿಸಿ ನಣ್ಣ ಪ್ರಾಜೆಕ್ಟನ್ನಾದರೂ ಮಾಡಿ ಈ ಜಮೀನುಗಳಿಗೆ ನೀರನ್ನೊದಗಿಸಲು ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಮಾನಿಕೆರೆಗೆ ಧಕ್ಕೆಬಾರದಿರುವ ಹಾಗಿದ್ದರೆ ಒಪ್ಪಬಹುದು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಯಾರದೂ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲವೆಂದು ಕಂಡರೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಮಾನಿಕೆರೆಗೆ ತೊಂದರೆಯಿಲ್ಲವೆಂದು ಹೇಳಿದರೆ ಅನಂತರ ತೀರ್ಮಾನ ಮಾಡೋಣ.

QUESTIONS FOR ANSWERS ON THE DAY

(but not taken up).

Water Supply to Bellary City.

Q.—201. Sri B. V. NARAYANA REDDY (Bagepalli-Gudibanda).—

Will the Government be pleased to state:—

(*a*) whether any scheme for water supply to Bellary City was sanctioned;

(*b*) if so, when and what is the estimate;

(*c*) what is the progress achieved?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) In 1954.
Rs. 1,45,000.

(*c*) An outlay of Rs. 60,515-13-0 has been incurred up to the end of November 1955.